ಹವಾಮಾನ ಮುನ್ಸೂಚನೆ: ನಗರದಲ್ಲಿ ಬೆಳಗಿನ ಜಾವ ಚಳಿಯ ವಾತಾವರಣ ನಂತರ ಶುಭ್ರ ಆಕಾಶ ಇರಲಿದೆ

ಡಿಸಿಎಫ್ ಕಚೇರಿ ಪೀಠೋಪಕರಣ ಜಪ್ತಿ

ಮಂಡ್ಯ: ಅಣ್ಣು ಪ್ರದೇಶದಲ್ಲಿ ತಂತಿ ಬೇಲಿ ನಿರ್ಮಿಸಿದ್ದ ಗುತ್ತಿಗೆದಾರರಿಗೆ ಹಣ ಪಾವತಿಸದ ಕಾರಣ, ಹಟ್ಟುವರಿ ಜಿಲ್ಲಾ ಮತ್ತು ಸಷನ್ಸ್ ನ್ಯಾಯಾಲಯದ ಆದೇಶದಂತೆ ಅರಣ್ಯ ಭವನದ (ಡಿಸಿಎಫ್ ಕಚೇರಿ) ಪೀಠೋಪಕರಣ ಮತ್ತು 14 ಕಂಪ್ಯೂಟರ್‌ಗಳನ್ನು ಬುಧವಾರ ಜಪ್ತಿ ಮಾಡಲಾಯಿತು.

ಗುತ್ತಿಗೆದಾರರಾದ ನಾಗಮಂಗಲ ತಾಲ್ಲೂಕಿನ ಮಳೆಗೌಡನಹಳ್ಳಿಯ ಎಂ.ವೈ. ಸುರೇಶ್ ಹಾಗೂ ಶ್ರೀರಂಗ-ಪಟ್ಟಣ ತಾಲ್ಲೂಕಿನ ಗೌಡಹಳ್ಳಿಯ ರಾಜಣ್ಣ ಪಿ.ಎನ್ ಅವರು, 2022ರಲ್ಲಿ ₹3.24 ಕೋಟಿ ಮೌಲ್ಯದಲ್ಲಿ 51 ಕಿ.ಮೀ. ದೂರದವರೆಗೆ ತಂತಿಬೇಲಿ ಕಾಮಗಾರಿ ನಡೆಸಿದ್ದರು. ಬ೿ಲ್ ಸಲ್ಲಿಸಿದ್ದರೂ ಹಣ ಪಾವತಿಯಾಗಿರಲಿಲ್ಲ. ನಿಗದಿತ ಸಮಯದೊಳಗೆ ಪಾವತಿಸುವಂತೆ ನ್ಯಾಯಾಲಯವು ಆದೇಶಿಸಿದ್ದರೂ ಪಾವತಿಸದ ಕಾರಣ ಮತ್ತೆ ಪ್ರಕರಣ ದಾಖಲಿಸಿ ಜಪ್ತಿ ಆದೇಶ ತಂದಿದ್ದರು. ಡಿಸಿಎಫ್ ರಫಾ ಅವರು ಹಣ ಪಾವತಿಗೆ ಸಮಯಾವಕಾಶ ಕೋರಿ, ಜಪ್ತಿ ಮಾಡದಂತೆ ಮನವಿ ಮಾಡಿದರು. ಗುತ್ತಿಗೆದಾರರು ಅದಕ್ಕೆ ಒಪ್ಪಲಿಲ್ಲ.

ಹೈ ಸ್ಪೀಡ್ ರೈಲು: ವೈಷ್ಣವ್ ಭರವಸೆ

ಬೆಂಗಳೂರು–ಪುಣೆ ನಡುವೆ ರೈಲು ಕಾರಿಡಾರ್ ಆರಂಭಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು-ಪುಣೆ ನಡುವೆ ಹೈ ಸ್ಪೀಡ್ ರೈಲು ಕಾರಿಡಾರ್ ಆರಂಭಿಸಬೇಕು ಎಂದು ಕೇಂದ್ರ ಭಾರಿ ಕೈಗಾರಿಕೆ ಸಚಿವ ಎಚ್.ಡಿ.ಕುಮಾರ-ಸ್ವಾಮಿ ಹಾಗೂ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಪ್ರತ್ಯೇಕವಾಗಿ ಮನವಿ ಮಾಡಿದರು.

ರೈಲ್ವೆ ಸಚಿವರನ್ನು ಸಂಸತ್ ಭವನದಲ್ಲಿ ಬುಧವಾರ ಭೇಟಿ ಮಾಡಿದ ಜೋಶಿ, 'ಬೆಂಗಳೂರು-ಪುಣೆ ಮಧ್ಯೆ ಹೈ ಸ್ಪೀಡ್ ರೈಲು ಕಾರಿಡಾರ್ ನಿರ್ಮಾಣವಾ-ದಲ್ಲಿ ಕರ್ನಾಟಕದ ಬಹುತೇಕ ಪ್ರದೇಶದ ಒಟ್ಟಿಗೆ ಅಭಿವೃದ್ಧಿ ಸಾಧ್ಯವಾಗುತ್ತದೆ' ಎಂದರು.

'ಈ ರೈಲು ಕಾರಿಡಾರ್ ನಿರ್ಮಾಣದಿಂದ ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಪ್ರಯೋಜನ ಆಗಲಿದೆ. ರಾಜ್ಯದ ಬೆಳಗಾವಿ, ಹುಬ್ಬಳ್ಳಿ, ಹಾವೇರಿ, ದಾವಣಗೆರೆ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಿಗೆ ಹೆಚ್ಚಿನ ಅನು-ಕೂಲವಾಗುತ್ತದೆ. ಅಲ್ಪದೇ ಪುಣೆಯಿಂದ ಕರ್ನಾಟಕದ ಅರೇಬು ಜಿಲ್ಲೆಗಳಿಗೆ ತ್ವರಿತ ಪ್ರಯಾಣ, ಸರಕಿನ ಸಾಗ್ರಯಾಗಲಿದೆ' ಎಂದರು.

ಈ ಪ್ರಸ್ತಾವಕ್ಕೆ ವೈಷ್ಣವ್ ಸಕಾರಾತ್-ಕವಾಗಿ ಸ್ಪಂದಿಸಿದ್ದಾರೆ ಎಂದು ಜೋಶಿ ತಿಳಿಸಿದ್ದಾರೆ.

'ರಾಜ್ಯಕ್ಕೆ ಹೈ ಸ್ಪೀಡ್ ರೈಲು ಕಾರಿ-ಡಾರ್‌ಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಅದಕ್ಕೆ ಹೆಚ್ಚುವರಿಯಾಗಿ ಬೆಂಗಳೂರು-ಪುಣೆ ಹೈ ಸ್ಪೀಡ್ ರೈಲು ಕಾರಿಡಾರ್ ನೀಡಲಾಗುತ್ತದೆ. ಈ ಮಾರ್ಗವು ಹುಬ್ಬಳ್ಳಿ, ಬೆಳಗಾವಿಮೂಲಕ ಹಾದು ಹೋಗಲಿದೆ ಎಂಬುದಾಗಿ ರೈಲ್ವೆ ಸಚಿವರು ತಿಳಿಸಿದರು' ಎಂದು ಕುಮಾರಸ್ವಾಮಿ ಮಾಹಿತಿ ನೀಡಿದರು.

ಬೆಂಗಳೂರು-ಮುಂಬೈಗೆ ಹೊಸ ರೈಲು ಆರಂಭಿಸಲಾಗುವುದು ಎನ್ನುವ ಮಾಹಿತಿಯನ್ನು ರೈಲ್ವೆ ಸಚಿವರು ತಮಗೆ ನೀಡಿದರು. ಬೆಂಗಳೂರು-ಪುಣೆ ಹೈ ಸ್ಪೀಡ್ ರೈಲು ಕಾರಿಡಾರ್ ಹಾಗೂ ಬೆಂಗಳೂರು-ಮುಂಬೈ ನಡುವಿನ ಹೊಸ ರೈಲಿನಿಂದ ಕರ್ನಾಟಕಕ್ಕೆ ಮತ್ತಷ್ಟು ಅನುಕೂಲ ಆಗಲಿದೆ' ಎಂದು ಅವರು ತಿಳಿಸಿದರು.

ಹೊಸ ರೈಲು ಸಂಪರ್ಕ ಮತ್ತು ಹಾಲಿ ರೈಲು ಮಾರ್ಗಗಳಿಲ್ಲದ ವನ್ಯಪ್ರದೇಶಗಳ ಅಪಘಾತಗಳನ್ನು ತಡೆಗಟ್ಟಲು ರೈಲ್ವೆ ಬೇಲಿ ಮತ್ತು ಬ್ಲಾಕ್ ಕಾರಿಡಾರ್‌ಗಳ ಅನುಷ್ಠಾನದ ಕುರಿತು ಮಾತುಕತೆ ನಡೆಸಲಾಯಿತು ಎಂದು ಸಚಿವರು ಹೇಳಿದರು.

ಮಂಡ್ಯ ಲೋಕಸಭೆ ಕ್ಷೇತ್ರವೂ ಸೇರಿದಂತೆ ಕರ್ನಾಟಕದ ಎಲ್ಲ ಕಡೆ ಬಾಕಿ ಇರುವ ರೈಲ್ವೆ ಯೋಜನೆಗಳ ಬಗ್ಗೆ ಚರ್ಚೆಸಲಾಯಿತು. ಮೈಸೂರು-ಬೆಂ-ಗಳೂರು ನಡುವೆ ಸಂಚರಿಸುವ ಒಡಿಯರ್ ಎಕ್ಸ್‌ಪ್ರೆಸ್ ರೈಲಿಗೆ ರಾಮ-ನಗರದಲ್ಲಿ ನಿಲುಗಡೆ ಕೋರಿ ಮನವಿ ಮಾಡಲಾಯಿತು ಎಂದರು.

ಅಶ್ವಿನಿ ವೈಷ್ಣವ್ ಹಾಗೂ ಎಚ್.ಡಿ.ಕುಮಾರಸ್ವಾಮಿ ಚರ್ಚಿಸಿದರು

ಹೂಡಿಕೆ ಕುರಿತು ಸಚಿವರ ಜತೆಗೆ ಚರ್ಚೆ

ಉಕ್ಕು ಸಚಿವಾಲಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

ಉಕ್ಕು ಸಚಿವಾಲಯದ ಹೊಸ ಹೂಡಿಕೆಗಳು ಮತ್ತು ಈಗಾಗಲೇ ನಡೆಯುತ್ತಿರುವ ಯೋಜನೆಗಳನ್ನು ಬಗ್ಗೆ ಹಾಗೂ ಉಕ್ಕು ವಲಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಮಾಡ್ಯ ಸಚಿವರಿಗೆ ಸಮಗ್ರ ಮಾಹಿತಿ ನೀಡಿದ್ದೇವೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕೈಗಾರಿಕಾ ಪಾರ್ಕ್ ಉದ್ಘಾಟನೆ

ಬೆಂಗಳೂರು: ಉದ್ಯಮ ಒಂದು ಕಾಲಕ್ಕೆ ಮಹಿಳೆಯರಿಗೆ ಸಾಧ್ಯವಾಗದ ಕನಸು ಆಗಿತ್ತು. ಈಗ ಮಹಿಳೆಯರ ಮನಸ್ಥಿತಿ ಬದಲಾಗಿದೆ. ಅವರು ಮನೆಗೆ ಸೀಮಿತವಾಗದೇ ಕೈಗಾರಿಕೋದ್ಯಮಿಗಳಾಗುತ್ತಿದ್ದಾರೆ ಎಂದು ಕೈಗಾರಿಕಾ ಪಾರ್ಕ್ ಮುಖ್ಯಸ್ಥೆ ರೇವತಿ ರಾಜು ಹೇಳಿದರು.

ಗೌರಿಬಿದನೂರಿನಲ್ಲಿ ಎಸ್ಸೆಎಲ್ಎ ಕೈಗಾರಿಕಾ ಪಾರ್ಕ್ ಉದ್ಘಾಟನೆಯ ಬಳಿಕ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳೆಯರಲ್ಲಿ ಉಂಟಾಗಿರುವ ಆಂತರಿಕ ಪರಿವರ್ತನೆಯನ್ನು ಕೈಗಾರಿಕಾ ಪಾರ್ಕ್ ಸೂಚಿಸುತ್ತದೆ. ಉದ್ಯಮದ ಹಾದಿಯಲ್ಲಿ ಮಹಿಳೆಯರು ದಾಪುಗಾಲು ಇಡುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದರು.

ಬೆಂಗಳೂರಿನಲ್ಲಿ ಕೈಗಾರಿಕಾ ವಲಯಗಳು ತುಂಬಿ ಹೋಗಿವೆ. ಜನದಟ್ಟಣೆ, ವಾಹನದಟ್ಟಣೆ ಹೆಚ್ಚಾಗಿದೆ. ಈ ಸಮಸ್ಯೆಯಿಂದ ಪಾರಾಗಲು, ದೀರ್ಘಕಾಲೀನ ನಿರ್ವಹಣೆಗಾಗಿ ಪುರಕಕಾಗುವಂತಿರುವ ಕೈಗಾರಿಕಾ ಪಾರ್ಕ್ ನಿರ್ಮಿಸಲಾಗಿದೆ ಎಂದು ವಿವರಿಸಿದರು.

ಮೈಸೂರಿನ ರಾಜವಂಶಸ್ಥರ ಕಾಮಾಕ್ಷಿದೇವಿ ಒಡೆಯರ್, ಮಾಜಿ ಶಾಸಕಿ ಸೌಮ್ಯಾ ರೆಡ್ಡಿ ಭಾಗವಹಿಸಿದ್ದರು.

ಸೈಯದ್ಯ ರೈಲ್ವೆ
ಟೆಂಡರ್ ಆಲ್ಪೆಪಿ ನಂ: ECN-01-2026
ಈ ಕೆಳ ಸುದಾರಣಾ, ಭಾರತದ ಎಲ್ಲಾದೇಶಗಳ ಸಂಸ್ಥೆಗಳಿಗೆ ಕೆಳಗಿನ ನಿಗದಿಯ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ವಾಹನ ಸೂಚನೆಗಳು	ರೂ. 1,12,52,164.92

ಬೆಂಗಳೂರು ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಿಂದ ಎಳೆಯಲ್ ಪೊಕಲೇನ್ ಎತ್ತುವಿಕೆಗಾಗಿ 1150 ಕೆವಿ (ಅತ್ಯಾಧುನಿಕವುದು 350 ಕೆವಿ) ಒಟ್ಟು 1500 ಕೆವಿ ಗೆ ಸಂಪೂರ್ಣವಾಗಿ ಹೆಚ್ಚುವಾ ಪೈ ಟ್ರಿಕ್ಸ್ ವಿದ್ಯುತ್ ಮೀಸ್ತಿಕ್ಕಿಯ ವ್ಯವಸ್ಥೆ.

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.02.2026, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊಡಿಸಲ ವಿಷಯಗಳಿಗೆಗಳ ಮತ್ತು ಟೆಂಡರ್‌ಗಳ ಸೂಚನೆಗಳನ್ನು ನೋಡುತ್ತಿರಿ ಇತಿ

ಉಪ ಮುಖ್ಯ ಎಕ್ಸಿಕ್ಯೂಟಿವ್ ಇಂಜಿನಿಯರ್/ಸ್ಟ್ರಾಕ್ಚರ್ ವಿನ್ಯಾಸಗಾರ (ನಿರ್ಮಾಣ)/ಬೆಂಗಳೂರು ದಕ್ಷಿಣ
PUB/BBSW/AF/PRB/SWR/2025-26

ಕಾಮ್ಯುನಿಟಿ ಬೆಳೆಗಳನ್ನು ಸಂಪರ್ಕಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂಖ್ಯೆ ಪಿಎಲ್/ಸಿಎಸ್/ಎಎಸ್ಸಿ/ 133/2025 ದಿನಾಂಕ 29.07.2025ಕ್ಕೆ
ಪೆಟ್ಟಿಗೆಯ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ-ಹರಾಜನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ವಿವರಣೆ	ಅಂದಾಜು ಮೌಲ್ಯ
1	ಜಮ್ಮುಸ್ಥಳದ ಕಥೆ	ರೂ. 964,51,54,197/-

(ಹೆಸರತಾಪಡೆ) ಎಎಚ್: 75400 ಮತ್ತು ಗುರುಗುಂಟಾ (ಸೆಗಂದರಾಬಾದ್): ಎಎಚ್: 134950 (99.55 ಕಿಮೀ) ಸಡಿಲೆ ಹೊಸ ಬ್ರಾಡ್ ಗೇಜ್ ಮಾರ್ಗದ ನಿರ್ಮಾಣಕ್ಕೆ ಆಗಿರುವ ಇದ್ದ ವಿಸ್ತೃತ, ಸಂಕೀರ್ಣ ಮತ್ತು ದೀರ್ಘಾವಧಿಗಳ ಕಾಮಗಾರಿ ಬಳಗೊಂಡಂತೆ. ಇದಿಗೆ ಮೇಗಾನಗರ್ಗ ಗಣಿ-ಬಾಣ ರಸ್ತೆಯ ಕಾಮಗಾರಿಯಾದಿಗೆ (ಹೆಸರತ್ ಬಳ್ಳಿಯ ಸಂಖ್ಯೆ. ಜಮ್ಮುಸ್ಥಳ-ಕಾಶ್ಮೀರಂ-ಅಖನೂರ್).

ಮಾಹಿತಿ ದಿನಾಂಕ

ಆಸ್ತಿಪತ್ರದಾಖಲಾತಿ	ಸಂಪೂರ್ಣಮಾಡುವುದು
12–02–2026 (15.00 ಗಂಟೆಗಳು)	17–03–2026 (15.00 ಗಂಟೆಗಳು)

ಹೆಚ್ಚಿನ ಮಾಹಿತಿಗಾಗಿ: www.ireps.gov.in ನೋಡಿ ಮತ್ತು
ಉಪ ಮುಖ್ಯ ಆಡಳಿತಾಧಿಕಾರಿ/ನಿರ್ಮಾಣ/ಕೆಎಸಿಸಿ, ಬೆಂಗಳೂರು ಕಂಟೋನ್ಮೆಂಟ್ ಸ್ಟೇಷನ್ ಕಟ್ಟಡ (ಎಎಚ್:87) (ಎಎಚ್:39)/ಎಆರ್ಸಿಯ ಕಟ್ಟಡ ಸಂಖ್ಯೆ: 207–ಎ
ಕಾಮ್ಯುನಿಟಿ ಬೆಳೆಗಳನ್ನು ಸಂಪರ್ಕಾಗಿ ಬುಕ್ ಮಾಡಲು Google Play Store ನಿಂದ UTS Mobile ಅಪ್ಲಿಕೇಷನ್ ಡೌನ್‌ಲೋಡ್ ಮಾಡಿ.
South Western Railway | SWRLY | SWRAILWAYHQ | sw_railways

ವಿಜಯನಗರ ಕ್ಲಬ್
ವಿಜಯನಗರ, ಬೆಂಗಳೂರು–560104. ದೂ: 080–2330 0675, 9606038126
ಎ.ಕೆ.ಜೆ/ಸಇಇ/2025–26/ ದಿನಾಂಕ: 26.01.2026

ಟೆಂಡರ್ ಅಧಿಸೂಚನೆ
ವಿಜಯನಗರ ಕ್ಲಬ್ ಬೆಂಗಳೂರು, ಇದ್ದಿಗೆ ಭಕ್ತಾಗಿ ಸೇವೆ (ಗಾರ್ಡನ್/ಸೂಪರ್ವೈಸರ್ ಸೆ) ಬಿಡಿಗಳು ನೋಂದಾಯಿತ/ಪರಿಣಿತರಿಂದ (ಇ.ಎಸ್.ಐ.ಪಿ.ಪ್ರಾವಿಡೆಂಟ್ ಫಂಡ್ ನೋಂದಾಯಿತ) ಮಧ್ಯಾಹ್ನಕ್ಕೆ ಭದ್ರತಾ ಸೇವಾ ಸಂಸ್ಥೆಗಳಿಂದ. ಸ್ವರ್ಣಕ್ಕಿಗೆ ದರಗಳನ್ನು ಸಮರ್ಪಿಸಿರುವ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದು ಚಚ್ಚಿಯುಳ್ಳ ಸಂಸ್ಥೆಗಳು ಟೆಂಡರ್‌ಗಳನ್ನು ದಿನಾಂಕ. 15.02.2026 ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೊ.ಸಂ. 9606098126 ನ್ನು ಸಂಪರ್ಕಿಸಿ
ಸಹಿ/– ಕಾರ್ಯದರ್ಶಿ, ವಿಜಯನಗರ ಕ್ಲಬ್

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂಖ್ಯೆ ಸಂ. BE-29-2025-26-01-29 (ಇ-ಟೆಂಡರಿಂಗ್ ಮೂಲಕ)
ಈ ಕೆಳ ಸುದಾರಣಾ, ಭಾರತದ ಎಲ್ಲಾದೇಶಗಳ ಸಂಸ್ಥೆಗಳಿಗೆ ಕೆಳಗಿನ ನಿಗದಿಯ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ನಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ	ಬಿಡಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ
BE-29-2025-26-01-29	1) ರೂಂಗಂಟು ಬಯಾಗಾಡ್ ಸೆಕ್ಷನ್‌ನಲ್ಲಿ ಸ್ಟ್ರಕ್ಚರಲ್ ಎಲ್ಲಿ ಸುಧಾರಣೆ ಮತ್ತು 2) ಯಶವಂತಪುರ – ಸಂಗರೆ ರೋಡ್ ವಿಭಾಗದ ನಿಡಾವಂದವ್ವಿ ರೋಡ್–ಗೆರ ವಿಭಿನ್ನವು ರೋಡ್–ಎ ಯ ಪ್ರಾಸ್ತಾಪ ನಿರ್ವಾಣ. 3) ಕಿಮೀಳಾದ ಬೆಂಗಳೂರು – ಪುಷ್ಪ 7 ಸ 80 ಕಡೆಯ ಎತ್ತರದ ಕೆಲ್ಲಾರನ್ನು ಬದಲಾಯಿಸುವುದು. ಎರಡನೇ ಪ್ರಕರಣ ಕಟ್ಟಡ ಮತ್ತು ಸ್ಟ್ರಾಕ್ಚಾರ್ಸ್ ಪ್ರದೇಶದಲ್ಲಿ ಗ್ರಾಬ್ಸ್ ಕೆಲ್ಲಿಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಕಾಗಿಗೆ ಕಂದಾಯಕ್ಕೆ ಉಳಿಕೆಯದ ಕಾಮಗಾರಿಗಳು ವಿಸ್ತೃತ ಸ್ವವ್ವ.	1,54,38,265/-	23.02.2026 / 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊಡಿಸಲ ವಿಷಯಗಳಿಗೆಗಳ ಮತ್ತು ಟೆಂಡರ್‌ಗಳ ಸೂಚನೆಗಳನ್ನು ನೋಡುತ್ತಿರಿ ಇತಿ
PUB/BBSI/AAF/PRB/SWR/2025-26 ಮನಸ್ಸ ವಿಭಾಗೀಯ ಎಕ್ಸಿಕ್ಯೂಟಿವ್ ಇಂಜಿನಿಯರ್/ಸಾಮಾನ್ಯ/ಬೆಂಗಳೂರು
ಕಾಮ್ಯುನಿಟಿ ಬೆಳೆಗಳನ್ನು ಸಂಪರ್ಕಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿ
South Western Railway - SWR | SWRLY | SWRAILWAYHQ | sw_railways

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಸಾಮಾಜಿಕ ಅರಣ್ಯ ಉಪ ವಿಭಾಗ, ಕೋಲಾರ
ಸಂಖ್ಯೆ:ಸ.ಅ.ಸ/ಕಾ.ಅ.ಉ/ಸಿ/ಅರ್–02/2025–26 ದಿನಾಂಕ:02.02.2026

ಮೊದಲನೇ ಬಾರಿಗೆ "ಇ" ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಮೂಲಕ ನೋಂದಾಯಿತ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2025–26 ಸಾಲಿನಲ್ಲಿ ಕೋಲಾರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ಎಲ್ಲಾ ತಾಲ್ಲೂಕುಗಳಿಗೆ ಸಾಮಾಜಿಕ ಅರಣ್ಯ ವಲಯಗಳಲ್ಲಿನ ಕೆ.ಎಫ್.ಡಿ.ಎಫ್ ಯೋಜನೆಯಡಿ ರಸ್ತೆ ಬದಿ ಮುಂಗಡ ಕಾಮಗಾರಿಗಳನ್ನು ಮತ್ತು ಕಟ್ಟಡಗಳು ಯೋಜನೆಯಡಿ ಕಟ್ಟಡ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಳ್ಳಲು ನೊಂದಾಯಿತ ಗುತ್ತಿಗೆದಾರರಿಂದ (http://kppp.karnataka.gov.in) ವೆಬ್ ಸೈಟ್‌ನಲ್ಲಿ ಈ ಮುಂದಿನಂತೆ ಮೊದಲನೆ ಬಾರಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹಾಗೂ ಸದರಿ ಟೆಂಡರ್‌ನಲ್ಲಿ ಏಕ ಬಿಡ್ಡುದಾರರು/ಯಾರು ಭಾಗವಹಿಸಿದ್ದಲ್ಲಿ 2ನೇ ಅವಧಿಗೆ ಟೆಂಡರ್ ಆಹ್ವಾನಿಸಲಾಗುವುದು ಅದರ ಪ್ರತ್ಯೇಕವಾಗಿ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಆಸಕ್ತರು ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಕ್ರ.ಸಂ	ವಿವರ
1	ಇ–ಹೋಟೆಲ್‌ನಲ್ಲಿ ಶಾಂತಿಕ್ಕೆ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.02.2026
2	ಶಾಂತಿಕ್ಕೆ ಬಿಡ್‌ಗಳನ್ನು ತೆರೆಯುವ ದಿನಾಂಕ:17.02.2026
3	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 18.02.2026

ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಅರ್.ಟಿ.ಸಂಖ್ಯೆ:476/ಕೆವಿಎಂಎಸಿ/2025–26

ನಿಧನ ವಾರ್ತೆ

ಜಗನ್ನಾಥ ರಾವ್ಹುತ್

ನೆಲಮಂಗಲ: ಪಟ್ಟಣದ ಸುಭಾಷ್‌ನಗರ ನಿವಾಸಿ, ತ್ರಾಮಗೊಂಡ್ರು ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸಿ.ಎಸ್.ಜಗನ್ನಾಥ ರಾವ್ಹುತ್ (80) ಮಂಗಳವಾರ ನಿಧನರಾದರು. ಅವರಿಗೆ ಪತ್ನಿಯನ್ನು ಮಗ ಮತ್ತು ಮಗಳು ಇದ್ದಾರೆ. ಸೀಬ್ರದ ಪುಣ್ಯಧಾಮ-ದಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಿತು.

ನೀರಾವರಿ ಯೋಜನೆ ಅನುಮೋದನೆಗೆ ಮಾಜಿ ಪ್ರಧಾನಿ ಮನವಿ

ಕರ್ನಾಟಕ ರಕ್ಷಿಸಿ: ಗದ್ಗದಿತರಾದ ದೇವೇಗೌಡ

ನವದೆಹಲಿ: ಕರ್ನಾಟಕ ಎದುರಿಸುತ್ತಿ-ರುವ ನೀರಾವರಿ ದಿಕ್ಕಿನ್ನತ ಬಗ್ಗೆ ರಾಜ್ಯ-ಸಭೆಯಲ್ಲಿ ಗದ್ಗದಿತರಾಗಿ ಮಾತನಾಡಿದ ಜೆಡಿಎಸ್ ಸದಸ್ಯ ಎಚ್.ಡಿ. ದೇವೆಗೌಡ, ಕರ್ನಾಟಕದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ದಯಮಾಡಿ ಪರಿಹರಿಸಿ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡರು.

ರಾಜ್ಯಸಭೆಯಲ್ಲಿ ಬುಧವಾರ ನಡೆದ ರಾಷ್ಟ್ರಪತಿಯವರ ಭಾಷಣದ ಮೇಲಿನ ವಂದನಾ ನಿರ